ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 59 ]
Total No. of Questions : 59 ]

**ಸಂಕೇತ ಸಂಖ್ಯೆ : 01-K**
**Code No. : 01-K**

**C**

**CCE PF**
**CCE PR**
**REVISED**

**Question Paper Serial No. 80**

# ವಿಷಯ : ಪ್ರಥಮ ಭಾಷೆ — ಕನ್ನಡ
# Subject : First Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

ದಿನಾಂಕ : 27. 03. 2020 ] [ Date : 27. 03. 2020

ಸಮಯ : ಬೆಳಗ್ಗೆ 9-30 ರಿಂದ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 125 ] [ Max. Marks : 125

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 59 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

1. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.
   (ಎ) ಅರ್ಧವಿರಾಮ (ಬಿ) ಅಲ್ಪವಿರಾಮ
   (ಸಿ) ಉದ್ಧರಣ (ಡಿ) ಆವರಣ

2. 'ಅವರೇ' ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ
   (ಎ) ಸಾಮಾನ್ಯಾರ್ಥಕಾವ್ಯಯ (ಬಿ) ಕ್ರಿಯಾರ್ಥಕಾವ್ಯಯ
   (ಸಿ) ಸಂಬಂಧಾರ್ಥಕಾವ್ಯಯ (ಡಿ) ಅವಧಾರಣಾರ್ಥಕಾವ್ಯಯ

3. 'ಶರಚ್ಚಂದ್ರ' ಪದವು ಈ ಸಂಧಿಯದ್ದಾಗಿದೆ
   (ಎ) ಶ್ಚುತ್ವ (ಬಿ) ಜಶ್ತ್ವ
   (ಸಿ) ವೃದ್ಧಿ (ಡಿ) ಯಣ್

4. ತೃತೀಯಾ ವಿಭಕ್ತಿಯ ಕಾರಕಾರ್ಥ
   (ಎ) ಕರ್ತ್ರಾರ್ಥ (ಬಿ) ಕರಣಾರ್ಥ
   (ಸಿ) ಅಪಾದಾನ (ಡಿ) ಸಂಪ್ರದಾನ

5. ಸಂಭಾವನಾರ್ಥಕ ಕ್ರಿಯಾರೂಪಕ್ಕೆ ಉದಾಹರಣೆಯಾಗಿರುವ ಪದ
   (ಎ) ಮಾಡೋಣ (ಬಿ) ಮಾಡನು
   (ಸಿ) ಮಾಡಿಯಾನು (ಡಿ) ಮಾಡಲಿ

6. 'ರಸ್ತೆ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.
   (ಎ) ಹಿಂದೂಸ್ಥಾನಿ (ಬಿ) ಪೋರ್ಚುಗೀಸ್
   (ಸಿ) ಅರಬ್ಬೀ (ಡಿ) ಫಾರ್ಸಿ

7. ಕುವೆಂಪುರವರು 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯವನ್ನು ರಚಿಸಿದ್ದಾರೆ. ಇದು
   (ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತವಾಕ್ಯ
   (ಸಿ) ಮಿಶ್ರವಾಕ್ಯ (ಡಿ) ಪ್ರಶ್ನಾರ್ಥಕವಾಕ್ಯ

8. ನಾಮಪದಗಳಲ್ಲಿ ಗುಣವಾಚಕಕ್ಕೆ ಉದಾಹರಣೆ ಇದು.
   (ಎ) ಪರ್ವತ (ಬಿ) ಹಳತು
   (ಸಿ) ಪೂಜಾರಿ (ಡಿ) ಪಡುವಣ

9. ಖ್ಯಾತ ಕರ್ಣಾಟಕಗಳೆಂದು ಪ್ರಸಿದ್ಧವಾದ ವೃತ್ತಗಳ ಸಂಖ್ಯೆ

(ಎ) ೨ (ಬಿ) ೪

(ಸಿ) ೬ (ಡಿ) ೮

10. 'ಕೌರವೇಂದ್ರನ ಕೊಂದೆ ನೀನು' ಪದ್ಯವು ಛಂದಸ್ಸಿನ ಈ ಪ್ರಕಾರದಲ್ಲಿದೆ

(ಎ) ಕಂದ (ಬಿ) ವೃತ್ತ

(ಸಿ) ರಗಳೆ (ಡಿ) ಷಟ್ಪದಿ

II. **ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** 5 × 1 = 5

11. ಮುರಾರಿ : ಕೃಷ್ಣ :: ರಾಜೀವ ಸಖ : ......................... .

12. ವಂಧ್ಯಾ : ಬಂಜೆ :: ದೃಷ್ಟಿ : ......................... .

13. ಇಮ್ಮಾವು : ಕರ್ಮಧಾರಯ ಸಮಾಸ :: ಹಿಂದಲೆ : ......................... .

14. ಕನ್ನಡಿಗ : ತದ್ಧಿತಾಂತನಾಮ :: ಪೆರ್ಮೆ : ......................... .

15. ಕೆನೆಮೊಸರು : ಜೋಡುನುಡಿ :: ಹೆಜ್ಜೆಹೆಜ್ಜೆಗೆ : ......................... .

III. **ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** 8 × 1 = 8

16. ಸೇನೆಯಲ್ಲಿದ್ದ ವೈದ್ಯನ ಹೆಸರೇನು ?

17. ರಾಮನ ಬರುವಿಕೆಗಾಗಿ ಮತಂಗಾಶ್ರಮದಲ್ಲಿ ಕಾಯುತ್ತಿದ್ದವರು ಯಾರು ?

18. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು ?

19. ಅಶೋಕ ಪೈ ಅವರ ವೃತ್ತಿ ಯಾವುದು ?

20. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ ?

21. ದುರ್ಯೋಧನ ತಾನು ಹೋರಾಡುತ್ತಿರುವುದು ಏಕೆ ಎಂದು ಭೀಷ್ಮನಿಗೆ ಹೇಳುತ್ತಾನೆ ?

22. ಭಗತ್‌ಸಿಂಗ್ ಬ್ರಿಟಿಷರ ವಿರುದ್ಧ ಸೇಡು ತೀರಿಸಿಕೊಂಡಿದ್ದಕ್ಕೆ ದೊರೆತ ಫಲವೇನು ?

23. ಬಾಲಕ ಭಗತ್‌ಸಿಂಗ್ ಹಳ್ಳಿಯಿಂದ ಅಮೃತಸರಕ್ಕೆ ಹೇಗೆ ಹೋದನು ?

IV. **ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $15 \times 2 = 30$

24. ಮುದುಕಿಯು ಸೈನಿಕರಿಂದ ರಾಹಿಲನನ್ನು ಹೇಗೆ ರಕ್ಷಿಸಿದಳು ?
25. ರಾಮಲಕ್ಷ್ಮಣರನ್ನು ಶಬರಿ ಹೇಗೆ ಸತ್ಕರಿಸಿದಳು ?
26. ಮಂಚಮ್ಮದೇವಿ ಮನೆಮಂಚಮ್ಮದೇವಿಯಾಗಿ ರೂಪುಗೊಂಡ ಬಗೆ ಹೇಗೆ ? ತಿಳಿಸಿ.
27. ಹುಲಿ ನಿರಾಶೆಯಿಂದ ಕೋಪಗೊಂಡು ಘರ್ಜಿಸಿ ಏಕೆ ಪಲಾಯನ ಮಾಡಿತು ?
28. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು ?
29. ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು ?
30. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ ?
31. 'ಮೇದಿನಿ ಪತಿ ನೀನು' ಎಂದು ಕೃಷ್ಣನು ಕರ್ಣನ ಮನದಲ್ಲಿ ಹೇಗೆ ಭಯವನ್ನು ಬಿತ್ತಿದನು ?
32. ಕುವೆಂಪುರವರ 'ಹಸುರು' ಪದ್ಯದ ಆಶಯಭಾವವನ್ನು ಬರೆಯಿರಿ.
33. ಅಂತಕಾತ್ಮಜನೊಂದಿಗೆ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳಲು ಕಾರಣವೇನು ?
34. ಅಧ್ವರದ ನಲ್ಗುದುರೆ ವಾಲ್ಮೀಕಿಯ ಆಶ್ರಮವನ್ನು ಹೇಗೆ ಪ್ರವೇಶಿಸಿತು ?
35. 'ವೈವಿಧ್ಯವೇ ಜೀವನದ ರಹಸ್ಯ' ಎಂಬುದನ್ನು ವಿವೇಕಾನಂದರು ಹೇಗೆ ತಿಳಿಸಿದ್ದಾರೆ ?
36. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?
37. ಮೃಗಗಳು ಹಾಗೂ ಮನುಷ್ಯರಿಗಿರುವ ವ್ಯತ್ಯಾಸವನ್ನು ಸುಂದರಿ ಹೇಗೆ ವಿವರಿಸುತ್ತಾಳೆ ?
38. ಬೀಸುಕಲ್ಲಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ ?

V. **ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** $4 \times 3 = 12$

39. ಪು.ತಿ. ನರಸಿಂಹಾಚಾರ್
40. ಎ.ಎನ್. ಮೂರ್ತಿರಾವ್
41. ಕುವೆಂಪು
42. ರನ್ನ

VI. **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** $1 \times 3 = 3$

43. ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್.

VII. **ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** $1 \times 3 = 3$

44. ರಾಮಲಕ್ಷ್ಮಣರು ಅಶ್ವಿನಿ ದೇವತೆಗಳಂತೆ ಶೋಭಿಸುತ್ತಿದ್ದರು.

VIII. **ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಎರಡನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ :** 2 × 3 = 6

45. ಬೆಳೆಯುವ ಸಿರಿ ಮೊಳಕೆಯಲ್ಲಿ

**ಅಥವಾ**

ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ

46. ದೇಶ ಸುತ್ತು; ಕೋಶ ಓದು

**ಅಥವಾ**

ಮಾತೇ ಮುತ್ತು ; ಮಾತೇ ಮೃತ್ಯು

IX. **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :** 6 × 3 = 18

47. "ಮೈಸೂರು ಗ್ರಾಮ ನ್ಯಾಯಾಲಯ ಕಾಯ್ದೆ"

48. "ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಟಿವ ಬಗೆ"

49. "ಅವಂತಿ ಸುಕುಮಾರನೆಂದು ಪೆಸರನಿಟ್ಟಂ"

50. "ವಸಂತವಾಗುತ ಮುಟ್ಟೋಣ"

51. "ತೇಲಿಸಿ ಮುಳುಗಿಸಿ ಖಂಡ–ಖಂಡಗಳ"

52. "ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು"

X. **ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 4 = 4

53. ಕೊಡಲಿ ಕೋರೆ ................................................

...................................................................

...................................................................

.............................................. ಹೇಳಲಿ ನಾನೆಷ್ಟಾ.

**ಅಥವಾ**

ಸಿಕ್ಕದ್ದು ತಗೊಂಡು ............................................

...................................................................

...................................................................

......................................... ಹಾಡಿದೆನಣ್ಣಾ ಜನಕಾ.

XI. **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** 1 × 4 = 4

54. ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು.

XII. **ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

55. 'ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾಮಂದಿರದಲ್ಲಿನ 'ರಾಯಲ್ ಚಾಪೆಲ್' ಮತ್ತು 'ಸ್ಟೋನ್ ಆಫ್ ಸ್ಕೋನ್'ಗಳ ವಿಶೇಷತೆಯನ್ನು ಕುರಿತು ಬರೆಯಿರಿ.

***ಅಥವಾ***

ವೂಲವರ್ಥ ಸ್ಟೇಷನರಿ ಅಂಗಡಿ ಹಾಗೂ ಲಂಡನ್ನಿನಲ್ಲಿ ಹೆಣ್ಣನ್ನು ಸತ್ಕರಿಸುವ ರೀತಿಯನ್ನು ಲೇಖಕರು ಹೇಗೆ ವಿವರಿಸಿದ್ದಾರೆ.

56. ಸಹಾಯವನ್ನು ನಿರೀಕ್ಷಿಸಿ ಬಂದ ದ್ರೋಣರನ್ನು ದ್ರುಪದ ನಿಂದಿಸಿದ ಸಂದರ್ಭದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.

***ಅಥವಾ***

'ಕೆಮ್ಮನೆ ಮೀಸೆವೊತ್ತೆನೇ' ಎಂದು ದ್ರೋಣನು ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ.

XIII. **ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** 1 × 4 = 4 ( 2 + 2 )

ಬಸವಣ್ಣನವರು ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು ಕಟ್ಟಬಯಸಿದರು. ಸಾಮಾನ್ಯ ಜನತೆಯನ್ನು ಉದ್ಧಾರೋನ್ಮುಖವಾಗಿಸಬೇಕಾದರೆ ಅವರಿಗೆ ಅರ್ಥವಾಗುವ ಭಾಷೆಯಲ್ಲಿ ವಿಷಯಗಳನ್ನು ತಿಳಿಸಬೇಕು ಎಂಬುದನ್ನು ಮನಗಂಡು ಸಂಸ್ಕೃತ ಭಾಷೆಯಲ್ಲಿ ನಿಕ್ಷಿಪ್ತವಾಗಿ ಜನಸಾಮಾನ್ಯರಿಗೆ ಅಗಮ್ಯವಾಗಿದ್ದ ಧರ್ಮರಹಸ್ಯವನ್ನು ತಿಳಿಯಾದ ಅಚ್ಚಗನ್ನಡದಲ್ಲಿ ತಿಳಿಸಿಕೊಟ್ಟರು. ಧರ್ಮವೆಂದರೆ ಅಗ್ರಾಹ್ಯವಾದ ಜಟಿಲ ಜಾಲವಲ್ಲ, ಒಂದು ವರ್ಗದ ಸ್ವತ್ತಲ್ಲ, ಎಲ್ಲರ ಆಸ್ತಿಯಾಗಬೇಕು. ಎಲ್ಲರ ಅಭ್ಯುದಯಕ್ಕೆ ಕಾರಣವಾಗಬೇಕು ಎಂಬುದು ಬಸವಣ್ಣನವರ ನಿಲುವು ಆಗಿತ್ತು.

ದೇವಲೋಕ, ಮರ್ತ್ಯಲೋಕಗಳಿಗೆ ಹೊಸ ಅರ್ಥ ಕಲ್ಪಿಸಿದರು. ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂದು ಹೇಳಿ

ಮರ್ತ್ಯಲೋಕ ಎಂಬುದು ಕರ್ತಾರನ ಕಮ್ಮಟವಯ್ಯ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ. ಸ್ವರ್ಗದ ಕೀಲಿಕೈ ಇರುವುದು ಮರ್ತ್ಯದಲ್ಲಿ ಎಂದು ವ್ಯಾಖ್ಯಾನಿಸಿದರು. 'ದೇವನೊಬ್ಬ ನಾಮ ಹಲವು' ಎಂದು ಬಹುದೇವೋಪಾಸನೆಯನ್ನು ಖಂಡಿಸಿದರು. ಕಾಯಕ ತತ್ವಕ್ಕೆ ಪ್ರಾಧಾನ್ಯತೆ ನೀಡಿದರು. ಅಂತರಂಗ ಬಹಿರಂಗಗಳ ಸಾಮರಸ್ಯವನ್ನು ತಿಳಿಸಿ, ನುಡಿಗೆ ತಕ್ಕ ನಡೆಯಿರಬೇಕು ಎಂದರು. ಸತ್ಯ ಅಹಿಂಸೆಗಳ ಅನುಷ್ಠಾನ, ಜಾತಿ ನಿರ್ಮೂಲನೆ, ಅಸ್ಪೃಶ್ಯತಾ ನಿವಾರಣೆ ಇಂದಿಗೂ ಅವಶ್ಯವೂ, ಅನಿವಾರ್ಯವೂ ಆಗಿದೆ. ಆದ್ದರಿಂದಲೇ ಬಸವಣ್ಣನವರು ಜಗತ್ತಿನ ಯಾವ ಕ್ರಾಂತಿಕಾರಿಗೂ ಮಿಗಿಲಾಗಿ ಕಾಣುತ್ತಾರೆ.

57. *ಪ್ರಶ್ನೆಗಳು :*

ಅ) ಧರ್ಮದ ಬಗೆಗೆ ಬಸವಣ್ಣನವರ ನಿಲುವು ಏನಾಗಿತ್ತು ?

ಬ) ಬಸವಣ್ಣನವರು ಏಕೆ ಒಬ್ಬ ಕ್ರಾಂತಿಕಾರಿ ಎನಿಸಿಕೊಂಡಿದ್ದಾರೆ ?

XIV. **ಕೆಳಗಿನ ಯಾವುದಾದರೂ *ಒಂದಕ್ಕೆ* ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :** 1 × 5 = 5

58. ನಿಮ್ಮನ್ನು ಚಿಕ್ಕಮಗಳೂರಿನ ಸರ್ಕಾರಿ ಪ್ರೌಢಶಾಲೆಯ 'ಆರಾಧನಾ' ಎಂದು ಭಾವಿಸಿಕೊಂಡು, ತಾರಾಲಯದ ವೀಕ್ಷಣಗೆ ಸಮಯಾವಕಾಶ ಕೋರಿ ಬೆಂಗಳೂರಿನ ನೆಹರೂ ತಾರಾಲಯದ ವ್ಯವಸ್ಥಾಪಕರಿಗೆ ಮನವಿ ಪತ್ರವನ್ನು ಬರೆಯಿರಿ.

***ಅಥವಾ***

ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ 'ಅಹನಿ' ಎಂದು ಭಾವಿಸಿಕೊಂಡು, 'ಗ್ರಂಥ ಸಪ್ತಾಹ'ದ ಅಡಿಯಲ್ಲಿ ಹಮ್ಮಿಕೊಳ್ಳಲಾದ 'ಪುಸ್ತಕ ಪ್ರದರ್ಶನ' ಕಾರ್ಯಕ್ರಮಕ್ಕೆ ಆಹ್ವಾನಿಸಿ ಹಾಸನದ ವಿವೇಕಾನಂದನಗರದಲ್ಲಿ ವಾಸವಾಗಿರುವ 'ಯಜತ್' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ.

XV. **ಕೆಳಗಿನ ಯಾವುದಾದರೂ *ಒಂದು* ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** 1 × 5 = 5

59. ಶಾಲೆಯಲ್ಲಿ ಮತದಾರರ ಜಾಗೃತಿ ಕ್ಲಬ್‌ನ ಚಟುವಟಿಕೆಗಳು.

***ಅಥವಾ***

ಬಾಹ್ಯಾಕಾಶ ಯೋಜನೆಯಲ್ಲಿ ಭಾರತದ ಸಾಧನೆ.